KAKB320004052019

Presented on : 03-08-2019
Registered on : 03-08-2019
Decided on : 04-04-2026
Duration : 06 years/ 08 months/ 01 days.

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಅಫಜಲಪೂರ.**

**ಉಪಸ್ಥಿತರುಃ**

**ಶ್ರೀ ಅನಿಲ ಅಮಾತೆ**
ಬಿ.ಎ.ಎಲ್.ಎಲ್.ಬಿ. (Hon's).,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಫಜಲಪೂರ.

**ಸಿ.ಸಿ.ನಂ.205/2019**

ದಿನಾಂಕಃ 04 ನೇ ಏಪ್ರಿಲ್-2026 ರಂದು

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಅಫಜಲಪೂರ ಪೊಲೀಸರಿಂದ)
**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

**ಆರೋಪಿ:** ಗಣಪತಿ ತಂದೆ ಬಸಣ್ಣ ಕಂಠೋಳ್ಳಿ,
59 ವರ್ಷ, ಉಃ ಕೂಲಿ ಕೆಲಸ,
ವಾಸಃ ಮಲ್ಲಾಬಾದ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

(ಆರೋಪಿತನ ಪರ ಶ್ರೀ. ಎ.ಎಸ್.ಕೆ.ವಕೀಲರು)

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 05.07.2019 |
| 2. | ಪ್ರಕರಣ ದಾಖಲಾದ ದಿನಾಂಕ | : | 05.07.2019 |
| 3. | ಆರೋಪಿತನನ್ನು ಬಂಧಿಸಿದ ದಿನಾಂಕ | : | -- |

| | | | |
|---|---|---|---|
| 4. | ಫಿರ್ಯಾದಿದಾರರ ಹೆಸರು | : | ಶ್ರೀ ಮಂಜುನಾಥ ಹೂಗಾರ ಪಿ.ಎಸ್.ಐ ಅಫಜಲಪೂರ ಪೊಲೀಸ ಠಾಣೆ. |
| 5. | ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ | : | 09.09.2024 |
| 6. | ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ | : | 08.12.2025 |
| 7. | ಅಪಾದನೆಗಳು | : | ಕರ್ನಾಟಕ ಪೊಲೀಸ್ ಕಾಯ್ದೆ ಕಲಂ.78(3) ರಡಿಯಲ್ಲಿ. |
| 8. | ನ್ಯಾಯಾಧೀಶರ ತೀರ್ಮಾನ | : | ಅಂತಿಮ ಆದೇಶದಂತೆ |

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

**ತೀರ್ಪು**

ಠಾಣಾಧಿಕಾರಿಗಳು ಅಫಜಲಪೂರ ಪೊಲೀಸ್ ಠಾಣೆ, ಇವರು ಆರೋಪಿತನ ವಿರುದ್ದ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆ:-**

ದಿನಾಂಕ:05.07.2019 ರಂದು ಬೆಳಿಗ್ಗೆ 11-40 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮಲ್ಲಾಬಾದ ಗ್ರಾಮದ ವಿಜಯಲಕ್ಷ್ಮೀ ದೇವರ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ನಿಂತುಕೊಂಡು ಹೋಗಿ ಬರುವ ಜನರಿಗೆ 1-00

ರೂಪಾಯಿಗೆ 80 ರೂಪಾಯಿ ಗೆಲ್ಲರಿ ಅಂತಾ ಅನ್ನುತ್ತಾ ಸಾರ್ವಜನಿಕರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿಗಳನ್ನು ಕೊಡುತ್ತಿದ್ದಾಗ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1, ಚಾಸಾ-4 ಮತ್ತು ಚಾಸಾ-5 ರವರು ದಾಳಿ ಮಾಡಿ ಆರೋಪಿತನನ್ನು ಹಿಡಿದು ಆತನ ವಶದಿಂದ ಮಟಕಾ ಜೂಜಾಟಕ್ಕೆ ಸಂಬಂಧಪಟ್ಟ ರೂ.1,020/- ರೂಪಾಯಿ ನಗದು ಹಣ ಮತ್ತು ಒಂದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಹಾಗೂ ಒಂದು ಬಾಲ ಪೆನ್ನ ವಶಪಡಿಸಿಕೊಂಡು ಸದರಿ ಆರೋಪಿತನ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಅಫಜಲಪೂರ ಪೊಲೀಸರು ತಮ್ಮ ಠಾಣಾ ಗುನ್ಹಾ ನಂ.116/2019 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ದ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತನ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತನ ಹಾಜರಾತಿಯನ್ನು ಪಡೆಯಲಾಯಿತು. ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಆಪಾದನೆಯ ಪತ್ರದ ನಕಲು ಪ್ರತಿಯನ್ನು ಆರೋಪಿತನಿಗೆ ನೀಡಿ, ಆಪಾದನೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿ ಆಪಾದನೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ಆಪಾದನೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನಾ ಪಕ್ಷದವರು ಆರೋಪಿತನ ವಿರುದ್ದ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 4 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 4 ಎಂದು ವಿಚಾರಣೆಗೆ ಒಳಪಡಿಸಿ ನಿಶಾನೆ ಪಿ-1 ಮತ್ತು 2 ದಾಖಲೆಗಳನ್ನು ಹಾಗೂ ಮುದ್ದೇಮಾಲು 1 ರಿಂದ 3ನ್ನು ಗುರುತಿಸಿರುತ್ತಾರೆ.

6. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲು ಮಾಡಿದ್ದು ಅದರಲ್ಲಿ ಆರೋಪಿತನು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತನ ವಿರುದ್ದ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತಮ್ಮ ಪರ ಸಾಕ್ಷಿದಾರರು ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

7. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಯಿತು.

8. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**<u>ಅಂಶಗಳು</u>**

1. ದಿನಾಂಕ:05.07.2019 ರಂದು ಬೆಳಿಗ್ಗೆ 11-40 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮಲ್ಲಾಬಾದ ಗ್ರಾಮದ ವಿಜಯಲಕ್ಷ್ಮೀ ದೇವರ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ನಿಂತುಕೊಂಡು ಹೋಗಿ ಬರುವ ಜನರಿಗೆ 1-00 ರೂಪಾಯಿಗೆ 80 ರೂಪಾಯಿ ಗೆಲ್ಲರಿ ಅಂತಾ ಅನ್ನುತ್ತಾ ಸಾರ್ವಜನಿಕರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿಗಳನ್ನು ಕೊಡುತ್ತಿದ್ದಾಗ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1, ಚಾಸಾ-4 ಮತ್ತು ಚಾಸಾ-5 ರವರು ದಾಳಿ ಮಾಡಿ

ಆರೋಪಿತನನ್ನು ಹಿಡಿದು ಆತನ ವಶದಿಂದ ಮಟಕಾ ಜೂಜಾಟಕ್ಕೆ ಸಂಬಂಧಪಟ್ಟ ರೂ.1,020/- ರೂಪಾಯಿ ನಗದು ಹಣ ಮತ್ತು ಒಂದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಹಾಗೂ ಒಂದು ಬಾಲ ಪೆನ್ನ ವಶಪಡಿಸಿಕೊಂಡಿದ್ದು, ಆ ಮೂಲಕ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಯಾವ ಆದೇಶ ಅಥವಾ ಶಿಕ್ಷೆ?

10. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 : ನಕರಾತ್ಮಕವಾಗಿ.

ಅಂಶ ನಂ.2 : ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

11. **ಅಂಶ ನಂ.1** ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.5 ಯಲಗೊಂಡ ತಂದೆ ಯಮುನಪ್ಪ ಪಿ.ಸಿ-586, ಇವರನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷ್ಯ ಮಾಡಿಸಿದ್ದು, ಪ್ರಾಸಾ-1 ರವರು ಈ ಪ್ರಕರಣದ ದಾಳಿ ಮಾಡಿದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 05.07.2019 ರಂದು ನಾನು ಹಾಗೂ ನಮ್ಮ ಠಾಣಾ ಸಿಬ್ಬಂದಿ ಚಾಸಾ-4 ರವರು ಠಾಣೆಯಲ್ಲಿದ್ದಾಗ ಚಾಸಾ-1 ರವರು ತಮ್ಮನ್ನು ಕರೆದು ಮಲ್ಲಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಸದರಿ ಆರೋಪಿತನು ನಿಂತುಕೊಂಡು ಹೋಗಿ-ಬರುವ ಜನರಿಗೆ 01/- ರೂಪಾಯಿಗೆ 80/- ರೂಪಾಯಿ ಗೆಲ್ಲಿರಿ ಅಂತಾ ಜನರ ಮನವಲಿಸಿ ಅವರಿಂದ ಹಣ ತೆಗೆದುಕೊಂಡು ಅವರಿಗೆ ಮಟಕಾ ಚೀಟಿಯ ಅಂಕಿಗಳನ್ನು ಬರೆದುಕೊಟ್ಟು ನಂತರ ಫಲಿತಾಂಶ ತಿಳಿಸುತ್ತೇನೆ ಎಂದು ಚಾಸಾ-1 ರವರಿಗೆ ತಿಳಿಸಿದ್ದು, ಆ ನಂತರ ಚಾಸಾ-1 ರವರು ಪಂಚರನ್ನು ಕರೆಯಿಸಿ ದಾಳಿಯ

ವಿಷಯವನ್ನು ತಿಳಿಸಿ, ಆ ನಂತರ ಸದರಿಯವರು ಪಂಚರಾಗಲು ಒಪ್ಪಿಕೊಂಡ ನಂತರ ಚಾಸಾ-1 ರವರು ತನ್ನನ್ನು ಹಾಗೂ ಪಂಚರನ್ನು ತಮ್ಮ ಠಾಣೆಯ ಪೋಲಿಸ ವಾಹವನ್ನು ತೆಗೆದುಕೊಂಡು 11.35 ಗಂಟೆ ಸುಮಾರಿಗೆ ಮಲ್ಲಾಬಾದ ಬಸ್ಸ ನಿಲ್ದಾಣದ ಹತ್ತಿರ ತಮ್ಮ ವಾಹವನ್ನು ನಿಲ್ಲಿಸಿ ವಿಜಯಲಕ್ಷ್ಮೀ ದೇವಸ್ಥಾನದ ಹತ್ತಿರ ನಡೆದುಕೊಂಡು ಹೋಗಿ ದೇವಸ್ಥಾನದ ಮರೆಗೆ ನಿಂತು ನೋಡಲಾಗಿ ಸದರಿ ಆರೋಪಿತನು ದೇವಸ್ಥಾನದ ಮುಂದುಗಡೆ ಸಾರ್ವಜನಿಕ ರಸ್ತೆಯಲ್ಲಿ ನಿಂತುಕೊಂಡು ಹೋಗಿ-ಬರುವ ಜನರಿಗೆ ಇದು ಕಲ್ಯಾಣ ಮಟಕಾ 01/- ರೂಪಾಯಿಗೆ 80 ರೂಪಾಯಿ ಗೆಲ್ಲಿರಿ ಅಂತಾ ಮನವಲಿಸಿ ಮಟಕಾ ಚೀಟಿ ಬರೆದುಕೊಡುವುದು ಕಂಡು ಬಂದಿರುವುದಾಗಿ ತಾವು ಸದರಿ ಆರೋಪಿತನನ್ನು ನೋಡಿ ಆತನ ಮೇಲೆ ಪಂಚರ ಸಮಕ್ಷಮ ತಾವು ದಾಳಿ ಮಾಡಿದಾಗ ಸಮಯ 11.45 ಗಂಟೆ ಆಗಿತ್ತು, ಚಾಸಾ-1 ರವರು ಸದರಿ ಆರೋಪಿತನ ಹೆಸರು ಮತ್ತು ವಿಳಾಸ ವಿಚಾರಿಸಿದಾಗ ಗಣಪತಿ ಬಸ್ಸಣ್ಣ ಕಂಟೋಳ್ಳಿ, ವಃ 51 ವರ್ಷ ಎಂದು ತಿಳಿಸಿರುತ್ತಾನೆಂದು ಹಾಗೂ ಸದರಿ ಆರೋಪಿತನನ್ನು ಚಾಸಾ-1 ರವರು ತಪಾಸಣೆ ಮಾಡಿದಾಗ ಸದರಿ ಆರೋಪಿತನ ಬಳಿ ರೂ.1020/- ನಗದು ಹಣ, ಒಂದು ಪೆನ್ನ ಮತ್ತು ಚೀಟಿಗಳು ದೊರಕಿರುವುದಾಗಿ ಚಾಸಾ-1 ರವರು ಪಂಚರ ಸಮಕ್ಷಮ 11.45 ರಿಂದ 12.45 ರ ವರೆಗೆ ಜಪ್ತಿ ಪಂಚನಾಮೆಯನ್ನು ಬರೆದುಕೊಂಡು, ಆ ನಂತರ ಮುದ್ದೇ ಮಾಲುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆಂದು ಹಾಗೂ ಸದರಿ ಆರೋಪಿತನನ್ನು ಮತ್ತು ದೊರೆತ ಮುದ್ದೇ ಮಾಲುಗಳನ್ನು ಠಾಣೆಗೆ ಕರೆದುಕೊಂಡು ಬಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-6 ರವರಿಗೆ ವಹಿಸಿಕೊಟ್ಟಿರುವುದಾಗಿ ತಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು, ತನಗೆ ತೆರೆದ ನ್ಯಾಯಾಲಯದಲ್ಲಿ ಒಂದು ಕವರನಲ್ಲಿರುವ 100/- ರೂಪಾಯಿಗಳ ಮುಖ ಬೆಲೆಯ 9 ನೋಟುಗಳು ಮತ್ತು 50 ರೂಪಾಯಿಗಳ ಮುಖ ಬೆಲೆಯ 2 ನೋಟು ಮತ್ತು 20 ರೂಪಾಯಿಗಳ ಮುಖ ಬೆಲೆಯ 1 ನೋಟನ್ನು ತನಗೆ ತೋರಿಸಿದ್ದು, ತಾನು

ಅವುಗಳನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಮತ್ತು ಕವರನಲ್ಲಿರುವ ಒಂದು ಮಟಕಾ ಚೀಟಿ ಮತ್ತು ಒಂದು ಪೆನ್ನನ್ನು ತನಗೆ ತೋರಿಸಿದ್ದು, ತಾನು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ-2 ಮತ್ತು ಮು.ಮಾ-3 ಎಂದು ಗುರುತಿಸಲಾಯಿತು ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

12. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.3–ಭಾಗಪ್ಪ ತಂದೆ ಲಕ್ಷ್ಮಣ ಚಾಲಕ, ಇವರನ್ನು ಪಿ.ಡಬ್ಲ್ಯೂ -2 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -2 ರವರು ಈ ಪ್ರಕರಣದ ಜಪ್ತಿ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ ಸುಮಾರು 3-4 ವರ್ಷಗಳ ಹಿಂದೆ ತಮ್ಮ ಊರಿನ ಗುಡಿಯ ಹತ್ತಿರ ಪೋಲಿಸರು ಬಂದು ತನ್ನಿಂದ ಸಹಿ ಪಡೆದಿರುತ್ತಾರೆಂದು ಹಾಗೂ ತನ್ನ ಮುಂದೆ ಯಾವ ಪಂಚನಾಮೆಯನ್ನು ಮಾಡಿಲ್ಲ, ಪಂಚನಾಮೆ ಕುರಿತು ತನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

13. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.1–ಮಂಜುನಾಥ ತಂದೆ ಗುರುನಾಥ ಹೂಗಾರ ಪೋಲಿಸ ನಿರೀಕ್ಷಕರು, ಇವರನ್ನು ಪಿ.ಡಬ್ಲ್ಯೂ -3 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -3 ರವರು ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05.07.2019 ರಂದು ಬೆಳಗ್ಗೆ ಠಾಣೆಯಲ್ಲಿದ್ದಾಗ ಠಾಣಾ ವ್ಯಾಪ್ತಿಯ ಮಲ್ಲಾಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಹತ್ತಿರ ಅಕ್ರಮವಾಗಿ ಮಟಕಾ ಜೂಟಾಟ ಬರೆದು ಕೊಳ್ಳುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದ ಮೇರೆಗೆ ಠಾಣಾ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರನ್ನು ಮತ್ತು ಚಾಸಾ-2 ಮತ್ತು 3 ರವರನ್ನು ದಾಳಿಯ ಕುರಿತು ತಿಳಿಸಿ ಅವರಿಗೆ ಪಂಚರಾಗಲು ಕೇಳಿದ್ದು ಅವರು ಅದಕ್ಕೆ

ಒಪ್ಪಿಕೊಂಡ ಮೇರೆಗೆ ತಾನು, ಠಾಣಾ ಸಿಬ್ಬಂದಿಗಳು ಮತ್ತು ಪಂಚರನ್ನು ಕರೆದುಕೊಂಡು ಮಲ್ಲಾಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಮರೆಗೆ ನಿಂತು ನೋಡಲಾಗಿ ಅಲ್ಲಿ ಸದರಿ ಆರೋಪಿತನು ಮಟಕಾ ಚೀಟಿ ಬರೆದು ಸಾರ್ವಜನಿಕರಿಂದ ಹಣ ಪಡೆಯುತ್ತಿರುವುದನ್ನು ಖಚಿತ ಪಡಿಸಿಕೊಂಡು ಸಿಬ್ಬಂದಿಯೊಂದಿಗೆ ಆ ವ್ಯಕ್ತಿಯ ಮೇಲೆ ದಾಳಿ ಮಾಡಿ ಆತನನ್ನು ಹಿಡಿದು ಪಂಚರ ಸಮಕ್ಷಮ ಆತನನ್ನು ಶೋಧನೆ ಮಾಡಿ ನೋಡಿದಾಗ ಮಟಕಾ ಚೀಟಿಗೆ ಸಂಬಂಧಿಸಿದ ರೂ.1,020/- ಮತ್ತು ಒಂದು ಪೇನ್ ಮತ್ತು ಮಟಕಾ ಚೀಟಿಗಳು ದೊರಕಿರುವುದಾಗಿ ಆತನ ಹೆಸರು ವಿಚಾರಿಸಿದಾಗ ಆತನು ಗಣಪತಿ ಕಟೋಳಿ ಅಂತಾ ತಿಳಿಸಿದ್ದು, ತದ ನಂತರ ಆತನನ್ನು ವಿಚಾರಿಸಿದಾಗ ಮುಂಬೈ-ಕಲ್ಯಾಣ ಮಟಕಾ ಇದ್ದು, ಒಂದು ರೂಪಾಯಿಗೆ ರೂ.80/- ಕೊಡುವುದಾಗಿ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಶೋಧನಾ ಸಮುಚ್ಚಿತ ತಯ್ಯಾರಿಸಿದ ನಂತರ 11.40 ರಿಂದ 12.40 ರ ವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಮಟಕಾಕ್ಕೆ ಸಂಬಂಧಿಸಿದ ಚೀಟಿ, ಪೆನ್ನು ಮತ್ತು ಹಣವನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು, ಠಾಣೆಗೆ ಮರಳಿ ಚಾಸಾ-6 ರವರಿಗೆ ಮುಂದಿನ ತನಿಖೆಗಾಗಿ ಜಪ್ತಿ ಪಡಿಸಿಕೊಂಡ ಮುದ್ದೇ ಮಾಲು ಮತ್ತು ಕಡತಗಳನ್ನು ವರ್ಗಾಯಿಸಿರುತ್ತೇನೆಂದು ಹಾಗೂ ತನಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ತಾನು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು ಎಂದು ತನಗೆ ದೂರಿನ ಪ್ರತಿಯನ್ನು ತೋರಿಸಿದ್ದು, ತಾನು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಿದ್ದು, ತನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ತಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುವುದಾಗಿ ತನಗೆ ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರಿನ ಒಳಗಡೆ ಇರುವ ಒಂದು ಮಟಕಾ ಚೀಟಿ, ಒಂದು ಪೆನ್ನು ಮತ್ತು ರೂ.1,020/-ಗಳನ್ನು ತನಗೆ ತೋರಿಸಿದ್ದು,

ತಾನು ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಗಿರುತ್ತದೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

14. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.2–ರಹಿಮಾನ ತಂದೆ ಶಾಬುದ್ದೀನ, ಇವರನ್ನು ಪಿ.ಡಬ್ಲ್ಯೂ -4 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -4 ರವರು ಈ ಪ್ರಕರಣದ ಜಪ್ತಿ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-3 ರವರ ಪರಿಚಯ ಇರುತ್ತದೆ. ತನಗೆ ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಶಾನೆ ಪಿ-1 ಮತ್ತು ತನ್ನ ಸಹಿಯನ್ನು ನಿಶಾನೆ ಪಿ-1(ಬಿ) ಎಂದು ಗುರುತಿಸಲಾಯಿತು. ತಾನು ಒಂದು ದಿನ ಮಲ್ಲಾಬಾದ ಬಸ್ ನಿಲ್ದಾಣದ ಹತ್ತಿರ ನಿಂತಾಗ ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆಂದು ಹಾಗೂ ತನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

15. ಈ ಪ್ರಕರಣದಲ್ಲಿ ಪ್ರಾಸಾ-1 ಮತ್ತು 3 ರವರು ಅಧಿಕಾರಿ ವರ್ಗದ ಸಾಕ್ಷಿದಾರರಾಗಿರುತ್ತಾರೆ. ಈ ಪ್ರಕರಣದ ಗುನ್ನೆ ಸ್ಥಳದ ಜಪ್ತಿ ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ-2 ಮತ್ತು ಪ್ರಾಸಾ-4 ರವರು ಈ ಪ್ರಕರಣಕ್ಕೆ ಪ್ರತಿಕೂಲ ಹೇಳಿಕೆಯನ್ನು ನುಡಿದಿರುತ್ತಾರೆ. ಈ ಪ್ರಕರಣದ ಫಿರ್ಯಾದಿ ಚಾಸಾ-1 ರವರು ಗುನ್ನೆ ಸ್ಥಳದ ಸುತ್ತಮುತ್ತಲಿನ ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಯನ್ನು ಪಡೆದು ಸಾಕ್ಷ್ಯ ನುಡಿಸಿರುವುದಿಲ್ಲ. ಜಪ್ತಿಪಡಿಸಿಕೊಂಡರು ಎಂದು ಹೇಳುವ ರೂ.1,020/- ನಗದು ಹಣವನ್ನು ಯಾವ ಯಾವ ಮುಖ ಬೆಲೆ ನೋಟುಗಳು ಇರುತ್ತವೆ ಎಂದು ತೋರಿಸಲು ವಿಫಲರಾಗಿರುತ್ತಾರೆ. ಜಪ್ತಿಪಡಿಸಿಕೊಂಡ ಕಾಗದ ಚೀಟಿಯಲ್ಲಿ ಯಾವ ನಂಬರಗಳನ್ನು ಬರೆಯಲಾಗಿದೆ ಎಂದು ಹೇಳಿರುವುದಿಲ್ಲ. ಯಾವ ಕಂಪನಿಯ ಮಟಕಾ ಬರೆಯುತ್ತಿದ್ದೇನೆಂದು ತನಿಖೆಯಲ್ಲಿ ಪತ್ತೆ

ಹಚ್ಚಿರುವುದಿಲ್ಲ. ಮತ್ತು ಆರೋಪಿತನು ಯಾವ ಯಾವ ವ್ಯಕ್ತಿಗಳಿಂದ ರೂ.1,020/- ರೂಪಾಯಿಗಳನ್ನು ಪಡೆದು ಯಾವ ಯಾವ ಕಂಪನಿಯ ಮಟಕಾ ನಂಬರಗಳನ್ನು ಬರೆದುಕೊಟ್ಟಿರುತ್ತಾನೆ ಮತ್ತು ಈತನು ಯಾವ ಏಜೆಂಟನ ಅಡಿಯಲ್ಲಿ ಕೆಲಸ ಮಾಡುತ್ತಾನೋ ಅಥವಾ ನೇರವಾಗಿ ಮಟಕಾ ಕಂಪನಿಯ ಕಚೇರಿಯೊಂದಿಗೆ ಸಂಪರ್ಕ ಹೊಂದಿದ್ದಾನೆಂಬುದನ್ನು ತಮ್ಮ ಹೇಳಿಕೆಯಲ್ಲಿ ನುಡಿದಿರುವುದಿಲ್ಲ. ಮತ್ತು ಆರೋಪಿತನಿಗೆ ಮಟಕಾ ಚೀಟಿ ಬರೆಯುವುದರಿಂದ ಎಷ್ಟು ಕಮೀಷನ್ ಹಣ ಬರುತ್ತಿತ್ತು ಎಬುದನ್ನು ಆ ಕುರಿತು ಸಾಕ್ಷಿಯಲ್ಲಿ ನುಡಿದಿರುವುದಿಲ್ಲ. ಒಬ್ಬ ವ್ಯಕ್ತಿಯ ಅಂಗಶೋದನೆ ಅಥವಾ ಸ್ಥಳ ಶೋದನೆ ಮಾಡಬೇಕಾದರೆ ಅನುಸರಿಸತಕ್ಕ ಕಾನೂನಿನ ನಿಯಮಗಳನ್ನು ದಾಳಿ ಅಧಿಕಾರಿ ಚಾಸಾ-1 ರವರು ಪಾಲಿಸಿರುತ್ತಾನೆಂದು ತೋರಿಸಲು ಯಾವುದೇ ದಾಖಲಾತಿಗಳನಾಗಲೀ ಅದರ ಕುರಿತು ಹೇಳಿಕೆಯನಾಗಲೀ ನೀಡಿರುವುದಿಲ್ಲ.

16. ಸದರಿ ಪ್ರಾಸಾ-1 ಮತ್ತು 3 ರವರು ಅಧಿಕಾರಿ ವರ್ಗದ ಸಾಕ್ಷಿದಾರರು ಮತ್ತು ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿರುತ್ತಾರೆ. ಆರೋಪಿತನ ವಿರುದ್ದ ಆಪಾದನೆಯನ್ನು ರುಜುವಾತುಪಡಿಸಲು ಯಾವುದೇ ಪ್ರತ್ಯಕ್ಷ ಸಾಕ್ಷಿಯನ್ನು ಸಾಕ್ಷ್ಯ ಮಾಡಿಸಿರುವುದಿಲ್ಲ. ಪ್ರಾಸಾ-1 ಮತ್ತು 3 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಸಹ ಸದರಿಯವರ ಸಾಕ್ಷಿಯನ್ನು ಪುಷ್ಠಿಕರಿಸಲು, ನಂಬಲು ಸ್ವತಂತ್ರ ಮತ್ತು ಪ್ರತ್ಯಕ್ಷ ಸಾಕ್ಷಿಗಳ ಕೊರತೆ ಇರುತ್ತದೆ.

17. ಆದ್ದರಿಂದ ಸದರಿ ಪ್ರಾಸಾ-1 ಮತ್ತು 3 ರವರು ಅಧಿಕಾರಿ ವರ್ಗದ ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿದ್ದರಿಂದ ಮತ್ತು ಸದರಿಯವರ ಹೇಳಿಕೆಗಳನ್ನು ಪುಷ್ಠಿಕರಿಸುವ ಸಾಕ್ಷ್ಯಗಳು ಅಲಭ್ಯ ಇರುವುದರಿಂದ ಸದರಿಯವರ ಸಾಕ್ಷಿ ಹೇಳಿಕೆಗಳನ್ನು ಸಂಶಯಾತೀತವಾಗಿ ನಂಬಲು ಅರ್ಹರಾಗಿರುವುದಿಲ್ಲ.

18. ಆದ್ದರಿಂದ ಅಭಿಯೋಜನೆಯು ಆರೋಪಿತನ ಪ್ರತಿರಕ್ಷೆಯನ್ನು ಪರಿಗಣಿಸಿ, ಪ್ರಸ್ತುತ ಪ್ರಕರಣವನ್ನು ನೋಡಲಾಗಿ, ಅಭಿಯೋಜನೆಯು ತನ್ನ ಪ್ರಕರಣವನ್ನು ಸಂಶಯಾತೀತವಾಗಿ ಸಾಬಿತು ಪಡಿಸಿರುತ್ತದೆ ಎಂದು ಹೇಳಲು ಬರುವುದಿಲ್ಲ. ಅಭಿಯೋಜನೆಯ ಪ್ರಕರಣದಲ್ಲಿ ಕಂಡು ಬಂದ ಯುಕ್ತ ಸಂಶಯದ ಲಾಭವನ್ನು ಆರೋಪಿತನು ಪಡೆಯಲು ಹಕ್ಕುವುಳ್ಳವನು ಎಂದು ನಿರ್ಣಯಿಸಿ ಅಂಶ ನಂಬರ 1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

19. **ಅಂಶ ನಂ.2 :-** ಅಂಶ ನಂ.1ನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**ಆ ದೇ ಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತನನ್ನು ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ನಿರ್ದೋಷಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನನ್ನು ನ್ಯಾಯಾಲಯಕ್ಕೆ ಬರೆದುಕೊಟ್ಟ ವಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರನು ಬರೆದುಕೊಟ್ಟ ಮುಚ್ಚಳಿಕೆಯನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರನ್ವಯ ಇಂದಿನಿಂದ 6 ತಿಂಗಳವರೆಗೆ ಮುಂದುವರೆಸಲಾಗಿರುತ್ತದೆ.

ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿದ ಪಿ.ಆರ್.ನಂ.81/2019 ರಲ್ಲಿರುವ ಮುದ್ದೇಮಾಲು-1. ರೂ.1,020/-ನಗದು ಹಣ ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಜಮಾ ಮಾಡಲು ಈ ಮೂಲಕ ಆದೇಶಿಸಲಾಗಿದೆ.

ಮುದ್ದೇಮಾಲು-2 ಒಂದು ಮಟಕಾ ನಂಬರ ಬರೆದ ಚೀಟಿ ಮತ್ತು ಮುದ್ದೇಮಾಲು-3 ಒಂದು ಬಾಲ ಪೆನ್ ಯಾವುದೇ ಮೌಲ್ಯ ಹೊಂದಿರದ ವಸ್ತುಗಳು ಆಗಿರುವುದರಿಂದ, ಅವುಗಳನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ: 04 ನೇ ಏಪ್ರಿಲ್-2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಅನಿಲ ಅಮಾತೆ )**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

**ಅನುಬಂಧ**

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

ಪಿ.ಡಬ್ಲ್ಯೂ -1 : ಯಲಗೊಂಡ ತಂದೆ ಯಮುನಪ್ಪ ಪಿ.ಸಿ.586

ಪಿ.ಡಬ್ಲ್ಯೂ -2 : ಭಾಗಪ್ಪ ತಂದೆ ಲಕ್ಷ್ಮಣ

ಪಿ.ಡಬ್ಲ್ಯೂ -3 : ಮಂಜುನಾಥ ತಂದೆ ಗುರುನಾಥ ಹೂಗಾರ

ಪಿ.ಡಬ್ಲ್ಯೂ -4 : ರಹಿಮಾನ ತಂದೆ ಶಾಬುದ್ದೀನ್

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿ.ಪಿ.1 : ಜಪ್ತಿ ಪಂಚನಾಮೆ

ನಿ.ಪಿ.1(ಎ) : ಪ್ರಾಸಾ-3 ರವರ ಸಹಿ

ನಿ.ಪಿ.1(ಬಿ) : ಪ್ರಾಸಾ-4 ರವರ ಸಹಿ

| | | |
|---|---|---|
| ನಿ.ಪಿ.2 | : | ಪ್ರಾಸಾ-3 ರವರ ದೂರು |
| ನಿ.ಪಿ.2(ಎ) | : | ಪ್ರಾಸಾ-3 ರವರ ಸಹಿ |

**<u>ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿ ದಾರರ ಪಟ್ಟಿ</u>**

- ಇಲ್ಲ

**<u>ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

- ಇಲ್ಲ -

**<u>ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ</u>**

| | |
|---|---|
| ಮುದ್ದೇಮಾಲು-1 | ರೂ.1,020/- ನಗದು ಹಣ |
| ಮುದ್ದೇಮಾಲು 2 | ಒಂದು ಮಟಕಾ ಚೀಟಿ |
| ಮುದ್ದೇಮಾಲು-3 | ಒಂದು ಬಾಲ ಪೆನ್ |

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

Visit **ecourts.gov.in** for updates or download mobile app “**eCourts Services**” from Android or iOS